**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/01/ವಿ.ಕಾ/2016–17

ದಿನಾಂಕ: 22.06.2016

## ಅಧಿಸೂಚನೆ

**ವಿಷಯ: 2016–17ನೇ ಶೈಕ್ಷಣಿಕ ಸಾಲಿನ ಬಿ.ಎ ಹಾಗೂ ಎಂ.ಎ ತರಗತಿಗಳನ್ನು ಪ್ರಾರಂಭಿಸುವ ಬಗೆಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2016–17ನೇ ಶೈಕ್ಷಣಿಕ ಸಾಲಿನ ಅವಧಿಗೆ ಸಂಸ್ಕೃತ ಬಿ.ಎ ಹಾಗೂ ಸಂಸ್ಕೃತ ಎಂ.ಎ ಪದವಿಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆವೇದನಾ ಪತ್ರವನ್ನು ಆಹ್ವಾನಿಸಿದೆ. **ಆವೇದನ ಪತ್ರ ಸಲ್ಲಿಸಲು ಕೊನೆಯ ದಿನಾಂಕ: 22.07.2016.**

1. ಪ್ರಸಕ್ತ 2016–17ನೇ ಸಾಲಿನ ಶೈಕ್ಷಣಿಕ ವರ್ಷವು ಇದೀಗ ಪ್ರಾರಂಭವಾಗಲಿದ್ದು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಬಿ.ಎ ಹಾಗೂ ಎಂ.ಎ. ತರಗತಿಗಳು ಭಾಷಾ–ಶಾಸ್ತ್ರ–ವೇದಾಂತ ವಿಭಾಗಗಳಲ್ಲಿ ಆರಂಭಗೊಳ್ಳುತ್ತವೆ.
2. ಬಿ.ಎ ತರಗತಿಗೆ ಅರ್ಹತೆ :

   1. ಪಿ.ಯು.ಸಿ, ಸಾಹಿತ್ಯ, ಅಥವಾ ತತ್ಸಮಾನ ತರಗತಿಗಳಲ್ಲಿ ಸಂಸ್ಕೃತವನ್ನು ಭಾಷೆಯಾಗಿ ಆಯ್ಕೆ ಮಾಡಿಕೊಂಡವರು
   2. ಸಂಸ್ಕೃತರಹಿತ ಪದವಿ ಪೂರ್ವ ಶಿಕ್ಷಣ/ತತ್ಸಮಾನ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ
3. ಎಂ.ಎ ತರಗತಿಗೆ ಅರ್ಹತೆ :

   1. ಸಂಸ್ಕೃತ ವಿಷಯ + ಯಾವುದೇ ಪದವಿ
   2. ಸಂಸ್ಕೃತ ಸಾಹಿತ್ಯ ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ
   3. ಸಂಸ್ಕೃತ/ಪಾಲಿ/ಪ್ರಾಕೃತ/ಹಸ್ತಪ್ರತಿಶಾಸ್ತ್ರಗಳ ಸರ್ಟಿಫಿಕೇಟ್/ಡಿಪ್ಲೋಮಾ + ಯಾವುದೇ ಪದವಿ
   4. ಸುರಸರಸ್ವತೀ ಸಭೆ, ಶೃಂಗೇರಿ ಇವರ **'ಪ್ರವೇಶ'** ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ
   5. ಸಂಸ್ಕೃತ ಭಾರತಿಯ ಕೋವಿದ/ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ
   6. ಯಾವುದೇ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ.

   ಮೇಲ್ಕಂಡ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.
4. ಬಿ.ಎ ಹಾಗೂ ಎಂ.ಎ. ತರಗತಿಗಳು ಸೆಮಿಸ್ಟರ್ ಪದ್ಧತಿಯಲ್ಲಿ ನಡೆಯುತ್ತವೆ.
5. ಬಿ.ಎ ತರಗತಿಗಳಿಗೆ ವಾರ್ಷಿಕ ಶುಲ್ಕ– ರೂ. 4000/–, ಪ್ರವೇಶ ಶುಲ್ಕ– ರೂ. 100/–, ಪರೀಕ್ಷಾ ಶುಲ್ಕ (ಪರೀಕ್ಷಾ ಕಾಲದಲ್ಲಿ ಸೂಚಿಸಲಾಗುವುದು.) ಎಂ.ಎ ತರಗತಿಗಳಿಗೆ ವಾರ್ಷಿಕ ಶುಲ್ಕ–ರೂ. 6000/–, ಪ್ರವೇಶ ಶುಲ್ಕ ರೂ.200/– ಮತ್ತು ಪರೀಕ್ಷಾ ಶುಲ್ಕ (ಪರೀಕ್ಷಾಕಾಲದಲ್ಲಿ ಸೂಚಿಸಲಾಗುವುದು.)ವನ್ನು **ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು** ಈ ಹೆಸರಿಗೆ ಡಿ.ಡಿ ಸ್ವೀಕರಿಸಿ ಇದರೊಂದಿಗೆ ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಒಂದು ತಿಂಗಳ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.
6. ಅರ್ಜಿ ಪ್ರತಿಗಳು ಮತ್ತಿತರ ಶೈಕ್ಷಣಿಕ ವಿವರಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುತ್ತವೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **'ಕುಲಸಚಿವರು/ ಅಧ್ಯಯನಾಂಗದ ನಿರ್ದೇಶಕರು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018' ಇವರ ಕಛೇರಿಯನ್ನು **(ದೂ: 080–26705387/26701303)** ಸಂಪರ್ಕಿಸಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ **www.ksu.ac.in**ನಲ್ಲಿ ವಿವರಗಳನ್ನು ಪಡೆಯಬಹುದು.

**ಕುಲಸಚಿವರು**